# ಕಥೋಪದೇಶ – ಹಿತೋಪದೇಶದ ಕಥೆ

ವರುಣಾನದಿಯ ಸಮೀಪ ಒಂದು ಪ್ರದೇಶದಲ್ಲಿ ಮಂದ ವಿಷವೆಂಬ ಹೆಸರಿನ ಮುದಿ ಹಾವು ವಾಸವಾಗಿತ್ತು. ಅದಕ್ಕೆ ಕಪ್ಪೆಗಳನ್ನು ಹಿಡಿದು ತಿನ್ನುವ ಶಕ್ತಿ ಇರಲಿಲ್ಲ. ಆದ್ದರಿಂದ ಇನ್ನು ಮೇಲೆ ಹೇಗೆ ಜೀವಿಸಲಿ ಎಂದು ಚಿಂತಿಸುತ್ತಿತ್ತು. ಅದಕ್ಕೆ ಒಂದು ಉಪಾಯ ಹೊಳೆಯಿತು. ಕಪ್ಪೆಗಳು ತುಂಬಾ ವಾಸಿಸುವ ಒಂದು ಕೊಳದ ಬಳಿಗೆ ಹೋಗಿ, ವಿರಕ್ತನ ವೇಷ ಹಾಕಿಕೊಂಡು ಕುಳಿತುಕೊಂಡಿತು.

ಆಗ ನೀರಿನ ಅಂಚಿಗೆ ಒಂದು ಕಪ್ಪೆ ಬಂದು ಅದನ್ನು ಕೇಳಿತು: "ಮಾವಾ, ನೀನು ಇತ್ತೀಚೆಗೆ ಆಹಾರಕ್ಕಾಗಿ ಅಲೆದಾಡುವುದನ್ನೇ ಬಿಟ್ಟಂತಿದೆಯಲ್ಲ?" ಹಾವು ಉತ್ತರಿಸಿತು, "ದುರದೃಷ್ಟವಂತನಾದ ನನಗೆ ಆಹಾರದ ಆಸೆಯೇ ಅಡಗಿಹೋಗಿಬಿಟ್ಟಿದೆ. ನಿನ್ನೆ ರಾತ್ರಿ ನಾನು ಸಂಚರಿಸುತ್ತಿರುವಾಗ ನನಗೆ ಒಂದು ಮುದಿ ಕಪ್ಪೆ ಸಿಕ್ಕಿತು. ಅದನ್ನು ನಾನು ಹಿಡಿಯಹೋಗಲು ಅದು ಅಧ್ಯಯನದಲ್ಲಿ ತೊಡಗಿದ್ದ ಬ್ರಾಹ್ಮಣರ ಗುಂಪಿನ ನಡುವೆ ನುಸುಳಿತು. ಅದು ಎಲ್ಲಿ ಹೋಯಿತೆಂಬುದು ನನಗೆ ತಿಳಿಯಲೇ ಇಲ್ಲ. ಅಷ್ಟರಲ್ಲಿ ಕೊಳದ ಬಳಿಯಲ್ಲಿ ಬ್ರಾಹ್ಮಣನ ಬೆರಳನ್ನು ಕಂಡು ಮೋಸಹೋಗಿ ಅದೇ ಕಪ್ಪೆಯೆಂದು ತಿಳಿದು ಕಚ್ಚಿಬಿಟ್ಟೆ. ಅವನು ಕೂಡಲೆ ಸತ್ತುಹೋದ."

"ಅನಂತರ ದುಃಖಿತನಾದ ಅವನ ತಂದೆ ಬಂದು, 'ದುಷ್ಟಾ, ನಿರಪರಾಧಿಯಾದ ನನ್ನ ಮಗನನ್ನು ಕಚ್ಚಿಬಿಟ್ಟೆ. ಆ ಪಾಪಕ್ಕಾಗಿ ನೀನು ಕಪ್ಪೆಗಳಿಗೆ ವಾಹನವಾಗು. ಅವುಗಳು ಕೊಟ್ಟಷ್ಟು ತಿಂದು ಜೀವಿಸು' ಎಂದು ಶಾಪ ಕೊಟ್ಟನು. ಆದುದರಿಂದ ನಾನು ಇಲ್ಲಿನ ಕಪ್ಪೆಗಳಿಗೆ ವಾಹನ ವಾಗಲು ಬಂದಿರುವೆನು."


ಆ ಕಪ್ಪೆಯು ಇದನ್ನು ಕೇಳಿಸಿಕೊಂಡು, ಉಳಿದ ಕಪ್ಪೆಗಳಿಗೆ ತಿಳಿಸಿತು. ಅವು ಮಹದಾನಂದದಿಂದ ಜಲಪಾದನೆಂಬ ತಮ್ಮ ರಾಜನಿಗೆ ಇದನ್ನು ತಿಳಿಸಿದವು. "ಇದೇನು ಅದ್ಭುತ!" ಎಂದು ಅವನು ಹಾವಿನ ಹೆಡೆಯ ಮೇಲೇರಿ ಕುಳಿತನು. ಉಳಿದ ಕಪ್ಪೆಗಳು ಕೂಡ ಹಾವಿನ ಮೈಮೇಲೆ ಅಲ್ಲಲ್ಲಿ ಏರಿದವು. ಆ ಮುದಿ ಹಾವು ಕಪ್ಪೆಗಳಿಗೆ ಹುರುಪನ್ನುಂಟುಮಾಡಲು ನಾನಾ ಬಗೆಯ ಚಮತ್ಕಾರಗಳನ್ನು ತೋರಿಸಿತು.

ಮರುದಿನ ಹಾವು ಮೆಲ್ಲನೆ ಚಲಿಸತೊಡಗಿತು. "ನೀನು ನೆನ್ನೆಯಷ್ಟು ಚುರುಕಾಗಿಲ್ಲವಲ್ಲ!" ಎಂದು ಜಲಪಾದನು ಕೇಳಿದನು. ಆಗ ಹಾವು ಉಸುರಿತು, "ಆಹಾರವಿಲ್ಲದೆ ನನ್ನ ಗತಿ ಹೀಗೆ ಮಂದವಾಗಿದೆ." ಆಗ ಜಲಪಾದನು ಹೇಳಿದನು, "ಬೇಕಾದರೆ ಒಂದು ಕಪ್ಪೆಯನ್ನು ತಿನ್ನು." ಮಂದವಿಷನು ಸಂತೋಷದಿಂದ ಬ್ರಾಹ್ಮಣನ ಶಾಪದಂತೆ, ಕಪ್ಪೆಗಳು ಕೊಟ್ಟಷ್ಟನ್ನು ತಿಂದುಕೊಂಡು ಬಾಳತೊಡಗಿತು. ಅದಕ್ಕೇ ಹೇಳುವುದು:

**ಸದ್ಭಾವೇನ ಹರೇತ್ ಮಿತ್ರಂ ಸಂಭ್ರಮೇಣ ತು ಬಾಂಧವಾನ್।**
**ಸ್ತ್ರೀ ಭೃತ್ಯೌ ದಾನಮಾನಾಭ್ಯಾಂ ದಾಕ್ಷಿಣ್ಯೇ ನೇತರಾನ್ ಜನಾನ್॥**

"ಒಳ್ಳೆಯ ಮನೋಭಾವದಿಂದ ಮಿತ್ರರನ್ನು, ವೈಭವದಿಂದ ಬಂಧುಗಳನ್ನು, ಹೆಂಗಸರು ಮತ್ತು ಸೇವಕರನ್ನು ಗೌರವ–ಕೊಡುಗೆಗಳಿಂದಲೂ, ಇತರರನ್ನು ಪ್ರಾಮಾಣಿಕತೆಯಿಂದಲೂ ಒಲಿಸಿಕೊಳ್ಳಬೇಕು."

ಮಂದವಿಷನೆಂಬ ಮುದಿಹಾವು



**ಭಾರತದೇಶದ ಸಂತರು– ಯಾಜ್ಞವಲ್ಕ್ಯ**



ಯಾಜ್ಞವಲ್ಕ್ಯ ಋಷಿಯ ಉಲ್ಲೇಖವನ್ನು ಬೃಹದಾರಣ್ಯಕ ಉಪನಿಷತ್ತಿನಲ್ಲಿ ಕಾಣುತ್ತೇವೆ. ಇವನ ಹೆಸರೇ ಸೂಚಿಸುವಂತೆ ಇವನು 'ವೇದಜ್ಞಾನಿ.' ಇವನು ಮೂವರು ಗುರುಗಳಿಂದ ವಿದ್ಯೆಯನ್ನು ಪಡೆದನು. ಇವನಿಂದಲೇ 'ಶುಕ್ಲ ಯಜುರ್ವೇದ' ಎಂಬ ವೇದಶಾಖೆಯು ಹುಟ್ಟಿತು ಎಂದು ಹೇಳುತ್ತಾರೆ. ಇವನು ಒಮ್ಮೆ ಜನಕನ ಅರಮನೆಗೆ ಹೋಗುತ್ತಾನೆ. ಅಲ್ಲಿನ ಅನೇಕ ಬ್ರಹ್ಮವಾದಿಗಳ ಜೊತೆಗೆ ವಾದ ಮಾಡಿ ಅವರೆಲ್ಲರನ್ನೂ ತನ್ನ ಅಪಾರ ವಿದ್ವತ್ತಿನಿಂದ ಸೋಲಿಸುತ್ತಾನೆ. ಗಾರ್ಗಿ ಎಂಬ ಬ್ರಹ್ಮವಾದಿನಿ ಕೂಡ, ಅವನಿಗೆ ಅನೇಕ ಪ್ರಶ್ನೆಗಳನ್ನು ಹಾಕಿ, ಅವನನ್ನು ಪರೀಕ್ಷಿಸುತ್ತಾಳೆ. ಇವನಿಗೆ ಮೈತ್ರೇಯಿ ಮತ್ತು ಕಾತ್ಯಾಯನಿ ಎಂಬ ಇಬ್ಬರು ಪತ್ನಿಯರು. ಕಡೆಗೆ ಇವನು ಎಲ್ಲವನ್ನೂ ತ್ಯಾಗ ಮಾಡಿ, ಸಂನ್ಯಾಸ ಸ್ವೀಕರಿಸುತ್ತಾನೆ. ವೇದಕಾಲದ ಅದ್ವಿತೀಯ ಬ್ರಹ್ಮಜ್ಞಾನಿ ಯಾಜ್ಞವಲ್ಕ್ಯ

# ಕಥೋಪದೇಶ

## ಸ್ವರ್ಗಕ್ಕೆ ಬಾರದ ಕಲ್ಲುಗಳು



ಒಂದು ರಾಜ್ಯದಲ್ಲಿ ಒಬ್ಬ ಬಾದಶಹನಿದ್ದ. ಅವನಿಗೆ ಒಬ್ಬ ಮಂತ್ರಿಯಿದ್ದ. ಅವನು ದುರ್ಬುದ್ಧಿಯವನಾಗಿದ್ದ. ಜನರನ್ನು ಸುಲಿದು ಹಣದ ಗಂಟು ಕಟ್ಟುತ್ತಿದ್ದ.

ಗುರುನಾನಕರು ಒಮ್ಮೆ ಅವನನ್ನು ಭೇಟಿ ಮಾಡಿದರು. ಉಭಯ ಕುಶಲೋಪರಿಯ ನಂತರ ಗುರುನಾನಕರು ಹೇಳಿದರು: "ದಯವಿಟ್ಟು ನನ್ನ ನೂರು ಕಲ್ಲಿನ ಚೂರುಗಳನ್ನು ಇಟ್ಟುಕೊಂಡರೆ, ನಾನು ನಿನಗೆ ಯಾವಾಗಲೂ ಚಿರಋಣಿಯಾಗಿರುತ್ತೇನೆ." ಮಂತ್ರಿ ಹೇಳಿದ, "ಅದಕ್ಕೇನು ಕಷ್ಟ! ಆದರೆ ಅವುಗಳನ್ನು ನೀವು ಯಾವತ್ತು ಮರಳಿ ಪಡೆಯುತ್ತೀರಿ?"

ಗುರುನಾನಕರು ಹೇಳಿದರು, "ಅದು ಬಹಳ ಸುಲಭ. ಈ ಜಗತ್ತಿನಲ್ಲಿ ಬಾಳಿದ ಬಳಿಕ, ನಾನು–ನೀನು ಮತ್ತೆ ಭೇಟಿಯಾಗುತ್ತೇವಲ್ಲಾ, ಆಗ ನನ್ನ ಕಲ್ಲಿನ ತುಂಡುಗಳನ್ನು ಮರಳಿಸು."

ಆಗ ಮಂತ್ರಿ ನಗುತ್ತ ಹೇಳಿದ, "ಏನು ಹೇಳುತ್ತಿದ್ದೀರಿ, ಸ್ವಾಮಿ. ಆ ಕಲ್ಲುಗಳನ್ನು ನಾನು ಪರಲೋಕಕ್ಕೆ ಹೇಗೆ ತಾನೇ ತರಲಿ?!" ಆಗ ಗುರುನಾನಕರು ಹೇಳಿದರು, "ಅಯ್ಯಾ, ಮಂತ್ರಿವರ್ಯ! ನೀನು ಜನರನ್ನು ಸುಲಿಗೆ ಮಾಡಿ ಅಪಾರ ಧನರಾಶಿಯನ್ನು ಕೂಡಿಹಾಕಿರುವೆಯಲ್ಲ! ಅದರ ಜೊತೆಗೆ ಈ ಕಲ್ಲುಗಳನ್ನೂ ತೆಗೆದುಕೊಂಡು ಬಾರಯ್ಯ" ಎಂದರು. ಆಗ ಮಂತ್ರಿಗೆ ತನ್ನ ತಪ್ಪಿನ ಅರಿವಾಯಿತು. ಅವನು ಪಶ್ಚಾತ್ತಾಪದಿಂದ ತಪ್ತನಾಗಿ ಗುರುವಿನ ಕಾಲಿಗೆ ಬಿದ್ದ.



## ಬೆವರಿನ ದುಡಿಮೆ

ಟಾಲ್‌ಸ್ಟಾಯ್ ಯಾವಾಗಲೂ ಅತಿ ಸರಳ ಉಡುಪನ್ನು ಧರಿಸುತ್ತಿದ್ದರು. ಒಮ್ಮೆ, ಹಾಗೆ ರೇಲ್ವೆ ಪ್ಲಾಟ್‌ಫಾರ್ಮನಲ್ಲಿ ನಿಂತಿದ್ದರು. ಓರ್ವ ಮಹಿಳೆ ಅವರು ಕೂಲಿ ಅಂತ ಭಾವಿಸಿ, ಅವರನ್ನು ಕರೆದು, "ಈ ಪತ್ರವನ್ನು ಎದುರುಗಡೆ ಹೋಟೆಲಿನಲ್ಲಿ ಇರುವ ನನ್ನ ಪತಿಗೆ ತಲುಪಿಸಿ ಬಾ, ನಿನಗೆ ಎರಡು ರೂಬಲ್ ಕೊಡುತ್ತೇನೆ" ಎಂದಳು. ಟಾಲ್‌ಸ್ಟಾಯ್ ಆ ಪತ್ರವನ್ನು ಅವನಿಗೆ ಕೊಟ್ಟು ಬಂದರು.

ಅಷ್ಟರಲ್ಲಿ ಅಲ್ಲಿಗೆ ಬಂದ ಟಾಲ್‌ಸ್ಟಾಯ್‌ನ ಒಬ್ಬ ಮಿತ್ರ ಅವರಿಗೆ ನಮಸ್ಕರಿಸಿದನು. ಆ ಮಹಿಳೆಗೆ ಆಶ್ಚರ್ಯವಾಯ್ತು, "ಯಾರಿವರು?" ಎಂದು ಆಕೆ ಆ ಮಿತ್ರನನ್ನು ಕೇಳಿದಳು. ಟಾಲ್‌ಸ್ಟಾಯ್‌ನ ಪರಿಚಯವಾಗುತ್ತಲೇ ಆಕೆ ಲಜ್ಜಿತಳಾಗಿ ಕ್ಷಮೆಯಾಚಿಸುತ್ತಾಳೆ ಮತ್ತು ನಾಚಿಕೊಂಡು ರೂಬಲ್ ಮರಳಿ ಕೊಡಲು ಹೇಳುತ್ತಾಳೆ.

ಟಾಲ್‌ಸ್ಟಾಯ್ ನಗುತ್ತ ಆಕೆಗೆ ಹೇಳುತ್ತಾರೆ, "ಕ್ಷಮಿಸುವುದು ಭಗವಂತನ ಕಾರ್ಯ. ನಾನು ದುಡಿದು ಹಣ ಗಳಿಸಿದ್ದೇನೆ. ಬೆವರಿನ ದುಡಿಮೆ ಯಾವಾಗಲೂ ಅಮೂಲ್ಯ. ಅದನ್ನೇಕೆ ಹಿಂದಿರುಗಿಸಲಿ?"

*ಸಂಗ್ರಹ* : ಕು. ಗೀತಾ, ಬೆಂಗಳೂರು